# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **907**

2 ಸದಸ್ಯರ ಹೆಸರು : **ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)**

3 ಉತ್ತರಿಸಬೇಕಾದ ದಿನಾಂಕ : **22.02.2024**

4 ಉತ್ತರಿಸುವ ಸಚಿವರು : **ಗೃಹ ಸಚಿವರು**

| ಪ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಪೊಲೀಸ್ ಇಲಾಖೆಯಲ್ಲಿ ಡಿವೈ.ಎಸ್.ಪಿ. ಹುದ್ದೆಗಳು ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯ ಪೊಲೀಸ್ ಇಲಾಖೆಯಲ್ಲಿ ಡಿವೈ.ಎಸ್.ಪಿ. ಹುದ್ದೆಗಳು ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಇರುವುದಿಲ್ಲ. ಪ್ರಸ್ತುತ ಡಿವೈ.ಎಸ್.ಪಿ. (ಸಿವಿಲ್) ವೃಂದದಲ್ಲಿ ನೇರ ನೇಮಕಾತಿಯ 07 ಮತ್ತು ಮುಂಬಡ್ತಿಯ 36 ಹುದ್ದೆಗಳು ಖಾಲಿ ಇರುತ್ತವೆ. ಈ ಡಿವೈಎಸ್‌ಪಿ ವೃಂದದ ರಿಕ್ತ ಸ್ಥಾನಗಳ ಎದುರಾಗಿ ಕರ್ನಾಟಕ ನಾಗರೀಕ ಸೇವಾ ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿ ಪ್ರಸ್ತುತ 28 ಪಿ.ಐ(ಹೈ-ಕ ಯೇತರ-23 ಮತ್ತು ಹೈ-ಕ-5) ವೃಂದದ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. |
| (ಆ) | ಬಡ್ತಿ ಮೂಲಕ ಹಾಗೂ ನೇರ ನೇಮಕಾತಿ ಮೂಲಕ ತುಂಬಬೇಕಾದ ಎಷ್ಟು ಹುದ್ದೆಗಳು ಖಾಲಿ ಇವೆ; (ಪ್ರತ್ಯೇಕವಾಗಿ ವಿವರ ನೀಡುವುದು) | ಬಡ್ತಿ ಮೂಲಕ ಹಾಗೂ ನೇರ ನೇಮಕಾತಿ ಮೂಲಕ ತುಂಬಬೇಕಾದ ಹುದ್ದೆಗಳ ವಿವರಗಳನ್ನು ಈ ಕೆಳಕಂಡಂತೆ ಒದಗಿಸಿದೆ (see table below) |

| ಮಂಜುರಾತಿ ಬಲ | ಹೈ-ಕ ಯೇತರ ವೃಂದ | | ಹೈ-ಕ ವೃಂದ | |
|---|---|---|---|---|
| (395) | ನೇರ | ಮುಂಬಡ್ತಿ | ನೇರ | ಮುಂಬಡ್ತಿ |
| ಮಂಜೂರಾತಿ ಬಲ | 68 | 273 | 11 | 43 |
| ಕಾರ್ಯ ನಿರತ ಬಲ | 63 | 237 | 09 | 43 |
| ಖಾಲಿ ಸ್ಥಾನ | 5 | 36 | 02 | 00 |

ನೇರನೇಮಕಾತಿಯಲ್ಲಿ ಖಾಲಿ ಇರುವ ಡಿವೈಎಸ್‌ಪಿ ವೃಂದದ ಒಟ್ಟು 07 ಹುದ್ದೆಗಳನ್ನು ಒಳಗೊಂಡಂತೆ, 2024-25ನೇ ಸಾಲಿನವರೆಗೆ ಲಭ್ಯವಾಗುವ ಒಟ್ಟು 10 ಹುದ್ದೆಗಳನ್ನು ನೇರನೇಮಕಾತಿಗಾಗಿ ಬಿಡುಗಡೆ ಮಾಡಲು ಕ್ರಮವಹಿಸಿದೆ.

| ಪ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಇ) | ಇತ್ತೀಚೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಯಿಂದ ಡಿವೈ.ಎಸ್.ಪಿ. ಹುದ್ದೆಗೆ ಬಡ್ತಿ ನೀಡುವ ಸಂಬಂಧ ಅಧಿಸೂಚನೆ ಹೊರಡಿಸಲಾಗಿದೆಯೇ; | ಈಗಾಗಲೇ ಕರ್ನಾಟಕ ನಾಗರೀಕ ಸೇವಾ ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿ ಡಿವೈ.ಎಸ್.ಪಿ. (ಸಿವಿಲ್) ಹುದ್ದೆಯಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಮತ್ತು ಅರ್ಹರಿರುವ ಪಿ.ಐ. (ಸಿವಿಲ್) ವೃಂದದ 36 ಅಧಿಕಾರಿಗಳಿಗೆ ಸ್ಥಾನಪನ್ನ ಮುಂಬಡ್ತಿ ನೀಡಲು ದಿನಾಂಕ 09.02.2024 ರಂದು ಇಲಾಖಾ ಮುಂಬಡ್ತಿ ಸಭೆ ಜರುಗಿರುತ್ತದೆ. ಅರ್ಹ ಅಧಿಕಾರಿಗಳಿಗೆ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| (ಈ) | ಹಾಗಿದ್ದಲ್ಲಿ, ಸದರಿ ಬಡ್ತಿ ಪ್ರಕ್ರಿಯೆಯು ಯಾವ ಹಂತದಲ್ಲಿದೆ; ಯಾವ ಕಾಲಮಿತಿಯಲ್ಲಿ ಬಡ್ತಿ ನೀಡಲಾಗುವುದು? | |

ಸಂಖ್ಯೆ: ಒಇ 52 ಪಿಇಜಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು